ತಾರೀಖು 24ನೇ ಏಪ್ರಿಲ್ 1884.

ನಂ. 12.—ಇದರಿಂದ ಪ್ರಕಟಪಡಿಸುವದೇನಂದರೆ, ಶಿವಮೊಗ್ಗ ನ ಕಡೂರು ಡಿಸ್ಟ್ರಿಕ್ಟು ವುತ್ಪತ್ತೀ ಬಾಬತು ಇದರಜೀ ಕಂಡ ನಾ ಟೂಗಳು ಅಸಿಸ್ಟೆಂಟ್ ಕಮಿಸರೇಟರವರಿಂದ ಕೆಳಗೆ ಕಾಣಿಸಿರುವ ಸ್ಥಳಗಳಲ್ಲಿ ಆಯಾ ತಾರೀಖಿನೊಳಗೆ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುವವು :—

ಹರಾಜ್ ನಡಿಯತಕ್ಕ ಸ್ಥಳ.		ಹರಾಜಿನ ತಾರೀಖು.		ತೀಗದ ದಿಮ್ಮಿಗಳು.	ಕಾಡುಮರದ ದಿಮ್ಮಿಗಳು.	ಕೀಗ ಮತ್ತು ಕಾಡು ಮರದ ಕೊಡಿಗಳು.	ಒಟ್ಟಣ್ಣ
ಸೊರಬ	(ಸೊರಬ ತಾಲ್ಲೂಕು)	10ನೇ	ಮೇ 1884.	0	10	50	60
ಕೆರೆಹಳ್ಳಿ	ಡಿಟೋ	13	ಡಿಟೋ	15	50	200	265
ಹೆಲಗದ್ದೆ	ಡಿಟೋ	15	ಡಿಟೋ	100	0	175	275
ಶಿರಾಳಕೊಪ್ಪ	(ಶಿಕಾರಿಪುರ ತಾಲ್ಲೂಕು)	19	ಡಿಟೋ	10	200	200	410
ತುಂಬಿನಕಟ್ಟೆ	ಡಿಟೋ	21	ಡಿಟೋ	0	0	300	300
ಶಿಕಾರಿಪುರ	ಡಿಟೋ	23	ಡಿಟೋ	0	10	200	210
ಹೊಸೂರು	ಡಿಟೋ	26	ಡಿಟೋ	0	0	400	400
ಚಿಕ್ಕಹಲವನ	(ಹೊನ್ನಾಳಿ ತಾಲ್ಲೂಕು)	29	ಡಿಟೋ	0	19	22	41
ಚನ್ನಗಿರಿ	(ಚನ್ನಗಿರಿ ತಾಲ್ಲೂಕು)	6ನೇ	ಜೂ 1884.	50	0	400	450
ಕುಂಟಿನಮಿಡು	(ತರೀಕೆರೆ ತಾಲ್ಲೂಕು)	11	ಡಿಟೋ	0	0	100	100
ತರೀಕೆರೆ	ಡಿಟೋ	13	ಡಿಟೋ	50	50	100	200
ಲಕ್ಕವಳ್ಳಿ	ಡಿಟೋ	16	ಡಿಟೋ	600	600	0	1200
ಕಣಬೂರು	(ಕೊಪ್ಪ ತಾಲ್ಲೂಕು)	20	ಡಿಟೋ	200	300	0	500
ಆಯನೂರು	(ಶಿವಮೊಗ್ಗ ತಾಲ್ಲೂಕು)	23	ಡಿಟೋ	50	150	100	300
ಶಿವಮೊಗ್ಗ	ಡಿಟೋ	25	ಡಿಟೋ	150	350	600	1100

ಹರಾಜಿನ ಪರತ್ತುಗಳು.—ಮೈಸೂರು ಗೆಜೆಟ್ಟಿನಲ್ಲಿ ಫಾಯಿಷ್ ಮಾಡಲ್ಪಟ್ಟ 1873ನೇ ಇಸವಿ ಜೂ 12ನೇ ಮತ್ತು 20ನೇ ನಂಬರ್ ಇಸ್ತಿಹಾರ್‌ನಾಮೆ ಪ್ರಕಾರ ಇರುವದು ಮತ್ತು ಹರಾಜ್ ಕಾಲದಲ್ಲಿ ಓದಲ್ಪಡುವದು.

ತಾರೀಖು 12ನೇ ಮೇ 1884.

ನಂ. 25—ತಪ್ಪು ದುರಸ್ತು :—ಸ್ಯ 1883ನೇ ಇಸವೀ ನವೆಂಬರ್ 16ನೇ ಮತ್ತು ಂ 274ನೇ ನಂಬರ್‌ಉಳ್ಳ ದೀವಾನರವರ ಇಸ್ತಿಹಾರ್‌ನಾಮೆಯ 7ನೇ ಕಲಂನಲ್ಲಿ ಗಂಗೇನಹಳ್ಳಿ ಯೆಂಬದಕ್ಕೆ ಬದಲಾಗಿ ಗಂಗದಹಳ್ಳಿ ಯೆಂದು ಓದಿಕೊಳ್ಳತಕ್ಕದ್ದು.

ತಾರೀಖು 23ನೇ ಮೇ ಸ್ಯ 1884.

ನಂ. 41—ಸ್ಯ 1884ನೇ ಇಸವಿಯ "ಮೈಸೂರು ಚೀಫ್ ಕೋರ್ಟ್ ರೆಗ್ಯೂಲೇಷನಿನ" 17ನೇ ಸೆಕ್ಷನ್ ಅನುಸರಿಸಿ, ಮೈಸೂರು ಗವರ್ನಮೆಂಟಿನವರು, ಬೆಂಗಳೂರಲ್ಲಿ ಚೀಫ್ ಕೋರ್ಟಿನವರು ತಮ್ಮ ಕೋರ್ಟು ಮಾಡತಕ್ಕದ್ದೆಂದು ಇದರಿಂದ ನಿರ್ಣಯಿಸುತ್ತಾರೆ.

ನಂ. 42—ಮೈಸೂರು ಗವರ್ನಮೆಂಟಿನವರು ಇದರಿಂದ ಫಾಯಿಷ್ ಮಾಡಿ ನಿಯಮಿಸುವದೇನಂದರೆ, ಬೆಂಗಳೂರು, ಕೋಲಾರ, ಮತ್ತು ಚಿತ್ರದುರ್ಗ ಸಬ್ ಡಿವೀರ್ಜನಲ್ಲಿ ಅಡಗಿರುವ ತಾಲ್ಲೂಕುಗಳು ಸಹಿತ ತುಮಕೂರು ಈ ರೆವಿನ್ಯೂ ಡಿಸ್ಟ್ರಿಕ್ಟುಗಳ ಸರಹದ್ದುಗಳೊಳಗೆ, ಮೈಸೂರು ಚೀಫ್ ಕೋರ್ಟಿನವರು, ಸ್ಯ 1884ನೇ ಇಸವಿ ಮೈಸೂರು ಚೀಫ್ ಕೋರ್ಟು ರೆಗ್ಯೂಲೇಷನ್ 12ನೇ ಸೆಕ್ಷನ್

ನ್ನಲ್ಲಿ ಸೂಚಿಸಲ್ಪಟ್ಟ ಬಂದು ಡಿಸ್ಟ್ರಿಕ್ಟ್ ಕೋರ್ಟಿನ ಸಾಧಾರಣ ಅಸಲ್ ಸಿವಿಲ್ ಅಧಿಕಾರವನ್ನೂ, ಸದರೀ ರೆಗ್ಯೂಲೇಷನಿನ 13ನೇ ಸೆಕ್ಷನ್ನಲ್ಲಿ ಸೂಚಿಸಲ್ಪಟ್ಟ ಬಂದು ಸೆಷನ್ ಕೋರ್ಟಿನ ಸಾಧಾರಣ ಅಸಲ್ ಕ್ರಿಮಿನಲ್ ಅಧಿಕಾರವನ್ನೂ ಪಡೆದು ಚಲಾಯಿಸತಕ್ಕದ್ದು.

ನಂ. 43. --ಸ್ಯ 1884ನೇ ಇಸವಿಯ ಮೈಸೂರು ಜೀಫ್ ಕೋರ್ಟು ರೆಗ್ಯೂಲೇಷನಿನ 18ನೇ ಸೆಕ್ಷನ್ ಅನುಸರಿಸಿ, ಮೈಸೂರು ಚೀಮೆಯ ಜೀಫ್ ಕೋರ್ಟಿನ ಜೀಫ್ ಜಡ್ಜ್‌ರಾದ ಮೆ॥ ಸಿ. ಜಿ. ಪ್ಲುಮರ್ ಯವರಿಗೆ, ಸದರೀ ಸೆಕ್ಷನ್ನಲ್ಲಿ ವಿವರಿಸಲ್ಪಟ್ಟ ವಿಶಿಷ್ಟ ಅಧಿಕಾರಗಳೂ ಇದರಿಂದ ಉಂಟು ಮಾಡಲ್ಪಟ್ಟಿರುತವೆ.

ನಂ. 44.—ನಂದೀದುರ್ಗ ಡಿವೀರ್ಜ ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರ ಕೋರ್ಟು, ತುಮಕೂರು, ಮೈಸೂರು ಮತ್ತು ಚಿಕ್ಕಮಗಳೂರು ಸಬಾರ್ಡಿನೇಟ್ ಜಡ್ಜ್‌ರಗಳ ಕೋರ್ಟುಗಳು, ಸುದಾ 1884ನೇ ಮೇ 28ನೇ ಮುಕ್ತಂ ಲಗಾಯತು ಇದರಿಂದ ನೌಕೂಫ್ ಮಾಡಲ್ಪಟ್ಟಿರುತವೆ.

2. ಅದೇ ತಾರೀಖು ಲಗಾಯತು ಬೆಂಗಳೂರಲ್ಲಿ ಒಂದು ಸಬಾರ್ಡಿನೇಟ್ ಜಡ್ಜ್‌ರ ಕೋರ್ಟು ಸ್ಥಾಪಿಸಲ್ಪಡತಕ್ಕದ್ದು. ಈ ಕೋರ್ಟು, ಬೆಂಗಳೂರು, ಕೋಲಾರ ಮತ್ತು ಚಿತ್ರದುರ್ಗ ಸಬ್ ಡಿವೀರ್ಜನಲ್ಲಿ ಅಡಗಿರುವ ತಾಲ್ಲೂಕುಗಳು ಸಹಿತ ತುಮಕೂರು, ಈ ರೆವಿನ್ಯೂ ಡಿಸ್ಟ್ರಿಕ್ಟುಗಳ ಮೇಲೆ ಸಿವಿಲ್ ಅಧಿಕಾರವನ್ನು ಪಡೆದಿರತಕ್ಕದ್ದು.

3. ಮೆ॥ ಸಿ. ಕ್ರೈಸ್ ಯವರು, 1884ನೇ ಮೇ 28ನೇ ಮುಕ್ತಂ ಲಗಾಯತು ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

4. ಸ್ಯ 1883ನೇ ಇಸವಿ ಮೈಸೂರು ಸಿವಿಲ್ ಕೋರ್ಟುಗಳ ರೆಗ್ಯೂಲೇಷನಿನ 16ನೇ ಸೆಕ್ಷನ್ ಅನುಸರಿಸಿ ಮೆ॥ ಸಿ. ಕ್ರೈಸ್ ಯವರಿಗೆ, ಇದರಡಿ ಕಂಡ ತಾಲ್ಲೂಕುಗಳ ಸರಹದ್ದುಗಳೊಳಗೆ 50 ರೂಪಾಯಿಗಳ ತನಕ ಅಂತಾ ಕೋರ್ಟಿನಿಂದ ವಿಚಾರಿಸಲ್ಪಡತಕ್ಕ ದಾವೆಗಳ ವಿಚಾರಣೆಯ ಬಂದು ಸ್ಮಾಲ್‌ಕಾಜ್ ಕೋರ್ಟಿನ ಅಧಿಕಾರವು ಕೊಡಲ್ಪಟ್ಟಿರುತ್ತೆ.

ಬೆಂಗಳೂರು, ಹೊಸಕೋಟ್ಟೆ, ಆನೇಕಲ್, ಕ್ಯಾಖಾನಹಳ್ಳಿ ಮತ್ತು ಕ್ಲೋಸ್‌ಪೇಟೆ.

5. ಸ್ಯ 1883ನೇ ಜೂ 22ನೇ ಮುಕ್ತಂ 176ನೇ ನಂಬರ್ ಇಸ್ತಿಹಾರ್ ನಾಮೆಯಿಂದ ಬೆಂಗಳೂರು ಮ್ಯುನಿಸಿಪಲ್ ಮ್ಯುನಿಸಿಪರು ಮತ್ತು ಅಡಿಷನಲ್ ಮ್ಯುನಿಸಿಪರು ಇವರುಗಳಿಗೆ ಉಂಟು ಮಾಡಲ್ಪಟ್ಟ ಸ್ಮಾಲ್‌ಕಾಜ್ ಅಧಿಕಾರವು ಇದರಿಂದ ವಾಪಸ್ ತೆಗದುಕೊಳ್ಳಲ್ಪಟ್ಟಿರುತ್ತೆ.

6. ಮೈನರ್‌ಗಳ ಉಸ್ತುವಾರಿ ವ ಸಂರಕ್ಷಣೆ ಯಿಂತಾದ್ದಕ್ಕೆ ಸಂಬಂಧಿಸಿದ ರೂಲ್ಸಿನ 5ನೇ ಸೆಕ್ಷನ್ ಅನುಸರಿಸಿ ಬೆಂಗಳೂರು ಸಬಾರ್ಡಿನೇಟ್ ಜಡ್ಜ್‌ರಯವರು, ಸದರೀ ಸೆಕ್ಷನ್ ಅನುಸರಿಸಿ ದಾಖಿಲ್ ಮಾಡಲ್ಪಡತಕ್ಕ ತಮೆಯಲ್ ಅರ್ಜಿಗಳನ್ನೂ ಅಂಗೀಕರಿಸಿ ಫೈಸಲ್ ಮಾಡುವಂತೆ ಇದರಿಂದ ಅಧಿಕಾರ ಕೊಡಲ್ಪಡುತ್ತಾರೆ. ಪರಂತು ಮೈನರಿನ ಸ್ವತ್ತಿನ ಹೆಚ್ಚು ಭಾಗವು ಸದರೀ ಸಬಾರ್ಡಿನೇಟ್ ಜಡ್ಜ್‌ರಯ ಅಧಿಕಾರದ ಸ್ಥಳ ಸರಹದ್ದುಗಳೊಳಗೆ ಯಿರತಕ್ಕದ್ದು ಅಥವಾ ಮೈನರು ವಾಸ ಮಾಡತಕ್ಕದ್ದು.

ತಾರೀಖು 21ನೇ ಮಾರ್ಚಿ 1883.

ನಂ. 84.—ಕಾರ್ಯಾರ್ಥ ದೀವಾನರವರನ್ನು ಭೇಟೀ ಮಾಡುವದಕ್ಕೆ ಅಪೇಕ್ಷಿಸುವ ದೊಡ್ಡ ಮನುಷ್ಯರು ಮಂಗಳವಾರಗಳಲ್ಲಿ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಗೆ ಬರತಕ್ಕದ್ದು. ಈ ಬಗ್ಗೆ ಹಿಂದಿನ ದಿನ ಸೆಕ್ರಿಟೇರಿಯವರಿಗೆ ತಮ್ಮ ಕಾರ್ಡ್‌ಗಳನ್ನು ಕಳುಹಿಸತಕ್ಕದ್ದು.

2. ಅರ್ಜಿದಾರರು ಶುಕ್ರವಾರಗಳ ದಿನ ಮಧ್ಯಾನ್ಹಾತ್ಪರ 3 ಘಂಟೆಗೆ ಕಚ್ಚೇರಿಯಲ್ಲಿ ಕೇಳಲ್ಪಡುವರು.

ಬವೋಜೇಬ್ ಹುಕ್ಕುಂ,

ಆರ್. ವಿಜಯೊಂದ್ರರಾವ್,

ಸೆಕ್ರಿಟೇರಿ.